**ಸಾಕ್ಷಿಗೆ ದಿನಾಂಕ:25-06-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. BPR ವಕೀಲರಿಂದ ::**

ವಾದಿಯು ನನ್ನ ತಮ್ಮ ಎಂದರೆ ಸರಿ. ನಾನು ಹಾಗೂ ನನ್ನ ಸಹೋದರರು ಸೇರಿ ನಮ್ಮ ತಂದೆಯ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗದ ನಂತರ ವಿಭಾಗದಡಿಯಲ್ಲಿ ಬಂದ ಆಸ್ತಿಗಳನ್ನು ಅವರವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ವಾದಿಯು ಅವರಿಗೆ ಬಂದ ಹಿಸ್ಸೆಯಲ್ಲಿ ಎಷ್ಟು ಎಕರೆ ಜಾಗವನ್ನು ತೋಟ ಮಾಡಿಕೊಂಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಯಾವುದೇ ತೋಟ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ತಿಂಗಳಿಗೆ ಒಂದು ಬಾರಿ ಊರಿಗೆ ಬರುತ್ತಾರೆ ಹಾಗೂ ಅವರು ಪ್ರಸ್ತುತದಲ್ಲಿ ಆರೋಗ್ಯವಾಗಿದ್ದಾರೆ.

ದಾವಾ ಸರ್ವೇ ನಂಬರ್ 119 ಒಟ್ಟು 6 ಎಕರೆ 1 ಗುಂಟೆ ವಿಸ್ತೀರ್ಣದಲ್ಲಿ ಇರುತ್ತದೆ. ಸದರಿ ಸರ್ವೇ ನಂಬರ್ ನಲ್ಲಿ 5 ಗುಂಟೆ ಖರಾಬು ಇರುತ್ತದೆ. ಸದರಿ ಖರಾಬನ್ನು ಕುಡ್ಲೂರಿನಿಂದ ಕೊರಟಿಕೆರೆಗೆ ಹೋಗುವ ರಸ್ತೆಗೆ ಸಂಬಂಧಪಟ್ಟಂತೆ ಕಳೆದಿರುತ್ತಾರೆ. ಸದರಿ ರಸ್ತೆಯು ಸರ್ವೇ ನಂಬರ್ 119 ರ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಸದರಿ ರಸ್ತೆಯು 12 ಅಡಿ ಅಗಲ ಹಾಗೂ 150 ಅಡಿ ಉದ್ದ ಇರಬಹುದು. ನಾನು ಹೇಳುತ್ತಿರುವ ರಸ್ತೆಯು ನಿಪಿ5 ಅಟ್ಲಾಸ್ ನಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವ ಭಾಗದಲ್ಲೂ ಸಹ ಸರ್ವೇ ನಂಬರ್ 119 ನ ಜಾಗ ಇರುತ್ತದೆ ಎಂದರೆ ಸರಿ. ಸರ್ವೇ ನಂಬರ್ 119 ಇದುವರೆಗೂ ಪೋಡಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಅವರ ಆಸ್ತಿಯ ಅಳತೆಗೆ ಯಾವ ಕಾರಣಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಮ್ಮ ಸಹೋದರರ ಮಧ್ಯಯಾದ ವಿಭಾಗಕ್ಕೆ ಸಂಬಂಧಪಟ್ಟಂತೆ ಅರ್ಜಿ ನೀಡಿದ್ದರು ಎಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ಸಹೋದರರು 1997 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ2 ಪಹಣಿಯು ಬಹು ಮಾಲೀಕತ್ವದಲ್ಲಿ ಇರುವಂತಹ ಪಹಣಿ ಆಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 119 ದಿನಾಂಕ 11.01.2012, 24.03.2017, 03.08.2014 ರಂದು ಹಿಸ್ಸಾ ಪೋಡಿಯಾಗಿರುತ್ತದೆ ಎಂದರೆ ಸರಿ. ಸದರಿ ಹಿಸ್ಸಾ ಪೋಡಿಯ ವಿರುದ್ದ 3 ನೇ

ಪ್ರತಿವಾದಿಯು DDLR ರವರಿಗೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ವಾದಿಯನ್ನು ಸಹ ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ಮೇಲ್ಮನವಿಯಲ್ಲಿ ಆದ ಆದೇಶದ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ವಾದಿಯು ಕ್ರಮಾನುಸಾರ ಪೋಡಿ ಆಗಿರಲಿಲ್ಲದ ಕಾರಣ ಅದನ್ನು ರದ್ದುಪಡಿಸಬಹುದು ಎಂದು ಸದರಿ ಆದೇಶದ 5 ನೇ ಪ್ಯಾರಾದಲ್ಲಿ ಹೇಳಿಕೆಯನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಸದರಿ ಭಾಗವನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ.1 ಎ ಎಂದು ಗುರುತಿಸಲಾಯಿತು. ಅದರಂತೆಯೇ DDLR ರವರು ಹಿಂದೆಯಾದ ಪೋಡಿಯನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: